ಮೂಲ ದಾವಾ ನಂಃ116/2015

ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ 24-06-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ ವಕೀಲರಿಂದಃ

ನಾನು 2011 ನೇ ಸಾಲಿನಲ್ಲಿ ಡೈವರ್ಸ ಅರ್ಜಿಯನ್ನು ಸಲ್ಲಿಸುವಾಗ ಅದರಲ್ಲಿ ಮಗಳು ಇರುವುದಾಗಿ ನಮೂದಿಸಿದ್ದೇನೆ. ಆ ಅರ್ಜಿಯಲ್ಲಿ ನಾನು ನನ್ನ ಮಗಳಿಗೆ ಜೀವನಾಂಶ ಮತ್ತು ಆಸ್ತಿಯನ್ನು ಕೊಡಬೇಕೆಂದು ಕೇಳಿಲ್ಲ , ಆದರೆ ಇನ್ನೊಂದು ಪ್ರಕರಣದಲ್ಲಿ ಕೇಳಿದ್ದೇನೆ. ಸದ್ರಿ ಡೈವರ್ಸ ಅರ್ಜಿಯ ನಂತರ ಅವರು ಪ್ರಕರಣವನ್ನು ಮತ್ತೆ ಪುನಃ ಪ್ರಾರಂಭಿಸಿದಾಗ ನಾನು ಅದಕ್ಕೆ ಅರ್ಜಿಯನ್ನು ಸಲ್ಲಿಸಿ ಅದರಲ್ಲಿ ಮಗಳಿಗೆ ಜೀವನಾಂಶ ಮತ್ತು ಆಸ್ತಿಯನ್ನು ಕೇಳಿದ್ದೇನೆ . ಸದ್ರಿ ಅರ್ಜಿ ವಿಚಾರಣೆಯಲ್ಲಿರುವಾಗಲೇ ಅವರು ತೀರಿ ಹೋಗಿದ್ದರಿಂದ ಸದ್ರಿ ಅರ್ಜಿಯು ಕಿತ್ತು ಹೋಗಿದೆ. ನಾನು ಸದ್ರಿ ಡೈವರ್ಸನ ದಾಖಲೆ ಪತ್ರಗಳನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. ನನಗೆ 2011 ನೇ ಸಾಲಿನಲ್ಲಿ ಡೈವರ್ಸ ಆಗಿದೆ ಮತ್ತು ನಾನು ಆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 22.10.2011 ರಂದು ಡೈವರ್ಸ ಅರ್ಜಿ ಪುರಸ್ಕಾರ ಆಗಿದೆ ಎಂದರೆ ಸರಿಯಲ್ಲ . ನಾನು ಸದ್ರಿ ಅರ್ಜಿಯಲ್ಲಿ ಯಾವುದೇ ಜೀವನಾಂಶ ಮತ್ತು ಆಸ್ತಿಯಲ್ಲಿ ಪಾಲು ಕೇಳಿಲ್ಲ , ಅದ್ದಕ್ಕಾಗಿ ಈಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಜೀವಂತ ಇರುವಾಗಲೇ ಕುಟುಂಬದಲ್ಲಿ ತೊಂಡಿ ವಾಂಟಣಿ ಆಗಿತ್ತು , ಮತ್ತು ಅದರಂತೆ ಮ್ಯೂಟೇಶನ ಎಂಟ್ರಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ವಾಂಟನಿಯ ಪ್ರಕಾರ ನನ್ನ ಗಂಡನಿಗೆ ಸಾಲ್ಕೋಡ ಗ್ರಾಮದ ಸರ್ವೇ ನಂಬರ್ 336 ಹಿಸ್ಸಾ 10 , ಮತ್ತು ಸರ್ವೇ ನಂಬರ್ 339 ಹಿಸ್ಸಾ 15 ಬಂದಿತ್ತು ಎಂದರೆ ಸರಿ . ಅದರಂತೆ ಮ್ಯೂಟೇಶನ ರಿಜಿಸ್ಟರ್ ಆಗಿದೆ. ನನ್ನ ಗಂಡಅವರು ಎಲ್ಲ ವ್ಯವಸ್ಥೆ ಒಪ್ಪಿಕೊಂಡು ಸದ್ರಿ ಆಸ್ತಿಯನ್ನು ಪಡೆದಿದ್ದಾರೆ ಎಂದರೆ ಹೌದು. ಸದ್ರಿ ವ್ಯವಸ್ಥೆಯು ರೂಢಿಯಲ್ಲಿಯು ಸಹ ಬಂದಿತ್ತು ಎಂದರೆ ಹೌದು. ಅದರಂತೆ ನಾವು ಈ ಎರಡು ಆಸ್ತಿಗಳಲ್ಲಿ ಮಾತ್ರ ಪಾಲು ಪಡೆಯಲು ಹಕ್ಕುದಾರ ಎಂದರೆ ಸರಿಯಲ್ಲ.

ನಮ್ಮ ಕುಟುಂಬಕ್ಕೆ ಸಾಲ್ಕೋಡ ಗ್ರಾಮದ ಸರ್ವೇ ನಂಬರ್ 336 ಹಿಸ್ಸಾ 4 ,ಸಾಲ್ಕೋಡ ಗ್ರಾಮದ ಸರ್ವೇ ನಂಬರ್ 336 ಹಿಸ್ಸಾ 30 , ಮತ್ತು ಸಾಲ್ಕೋಡ ಗ್ರಾಮದ ಸರ್ವೇ ನಂಬರ್ 336 ಹಿಸ್ಸಾ 18 ,ಸಾಲ್ಕೋಡ ಗ್ರಾಮದ ಸರ್ವೇ ನಂಬರ್ 336 ಹಿಸ್ಸಾ 10 , ಹಾಗೂ ಸಾಲ್ಕೋಡ ಗ್ರಾಮದ ಸರ್ವೇ ನಂಬರ್ 339 ಹಿಸ್ಸಾ 15 , ಇವೆಲ್ಲವೂ ಸಹ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯಾಗಿದ್ದು , ಅವುಗಳನ್ನು ನಾವು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ಆಸ್ತಿಗಳನ್ನು ದಾವಾದಲ್ಲಿ ಸೇರಿಸಲು ನಮಗೆ ಯಾವುದೇ ತೊಂದರೆ ಇಲ್ಲ . ನಾವು ಈಗಾಗಲೇ ಸಾಲ್ಕೋಡ ಗ್ರಾಮದ ಸರ್ವೇ ನಂಬರ್ 336 ಹಿಸ್ಸಾ 10 , ಮತ್ತು ಸಾಲ್ಕೋಡ ಗ್ರಾಮದ ಸರ್ವೇ ನಂಬರ್ 336 ಹಿಸ್ಸಾ 15, ಹಾಗೂ ಇನ್ನುಳಿದ ಸ್ವತ್ತುಗಳನ್ನು ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದ್ರಿ ಸ್ವತ್ತುಗಳಲ್ಲಿ ಸರ್ವೇ ನಂಬರ್ 339 ಹಿಸ್ಸಾ 10 , ನ್ನು ಅವರು ಮಾರಾಟ ಮಾಡಿದ್ದಾರೆ ಅದಕ್ಕೆ ನಾವು ನ್ಯಾಯಾಲಯದಿಂದ ಈಗಾಗಲೇ ಸ್ಟೇ ತಂದಿದ್ದೇವೆ. ಸದ್ರಿ ಮಾರಾಟದ ಬಗ್ಗೆ ನಾವು ಕ್ರಯ ದಸ್ತಾವೇಜನ್ನು ಪಡೆದುಕೊಂಡು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ಅವರು ಇದೊಂದೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ. ಅವರು ಮಾರಾಟ ಮಾಡಿದ ವಿಷಯ

ನಮಗೆ ದಾವೆಯನ್ನು ಹೂಡುವಾಗ ಗೊತ್ತಾಯಿತು. ನಮಗೆ ಸದ್ರಿ ವಿಷಯ ತಿಳಿದ ಮೇಲೆ ಅದರ ಎಂಟ್ರಿ ಬಗ್ಗೆ ತಕರಾರನ್ನು ನಮ್ಮ ವಕೀಲರು ಮಾಡಿದ್ದಾರೆ. ಆ ರೀತಿ ತಕರಾರನ್ನು ಸಲ್ಲಿಸಿದ ಮೇಲೆಯು ಸಹ ಸದ್ರಿ ಆಸ್ತಿ ಅವರ ಹೆಸರಿಗೆ ಮಾಡಿಕೊಟ್ಟಿದ್ದಾರೆ. ಆ ರೀತಿ ಆದೇಶ ಆಗಿದ್ದರಿಂದ ಅದರ ಮೇಲೆ ನಾವು ಇನ್ನು ಮೇಲೆ ಅಪೀಲನ್ನು ಸಲ್ಲಿಸಲಿದ್ದೇವೆ. ಸದ್ರಿ ಆಸ್ತಿಯನ್ನು ಪರಮೇಶ್ವರ ಭಟ್ಟ ಎಂಬುವವರಿಗೆ ಮಾರಾಟ ಮಾಡಿದ್ದಾರೆ . ನನ್ನ ಗಂಡನ ಹೆಸರಿಗೆ ಬಂದಂತಹ ಆಸ್ತಿಯಲ್ಲಿ ನಾವು ಪಾಲನ್ನು ಕೇಳುತ್ತಾ ಇದ್ದೇವೆ. ನನ್ನ ಗಂಡನ ಆಸ್ತಿಯ ಹೊರತಾಗಿ ಮನೆ ಇರುವ ಜಾಗಕ್ಕೆ ನನ್ನ ತಕರಾರು ಇದೆ. ಸದ್ರಿ ಮನೆಯು ಯಾವ ಸರ್ವೇ ನಂಬರನಲ್ಲಿ ಮತ್ತು ಎಷ್ಟು ಕ್ಷೇತ್ರವಿದೆ ಎಂಬ ಮಾಹಿತಿ ನನಗೆ ಇಲ್ಲ. ನನಗೆ ನನ್ನ ಗಂಡನಿಗೆ ವಾಂಟನಿಯಿಂದ ಬಂದಂತಹ ಆಸ್ತಿಯಲ್ಲಿ ಮಾತ್ರ ಹಕ್ಕಿದ್ದು ಉಳಿದ ಆಸ್ತಿಗಳಲ್ಲಿ ಯಾವುದೇ ಹಕ್ಕಿಲ್ಲ ಎಂದು ಸೂಚಿಸುವುದು ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯವರು ತಮಗೆ ಬಂದಂತಹ ಆಸ್ತಿಯಲ್ಲಿ 6 ನೇ ಪ್ರತಿವಾದಿಗೆ ತಮ್ಮ ಕುಟುಂಬಕ್ಕೆ ಯೋಗ್ಯ ರೀತಿಯಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಮಾರಾಟಕ್ಕೆ ನಮಗೆ ಯಾವುದೇ ಹಕ್ಕಿಲ್ಲ ಅದ್ದಕ್ಕಾಗಿ ತಕರಾರನ್ನು ಮಾಡಲು ನಮಗೆ ಹಕ್ಕಿಲ್ಲ ಎಂದು ಸೂಚಿಸುವುದು ಸರಿಯಲ್ಲ. 6 ನೇ ಪ್ರತಿವಾದಿಯ ಸಹ ಸದ್ರಿ ಸ್ವತ್ತನ್ನು ಖರೀದಿಸುವಾಗ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಸದ್ಭಾವನೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು 2014 ನೇ ಸಾಲಿನಲ್ಲಿ ಕರಾವಳಿ ಮುಂಜಾವು ದಿನಪತ್ರಿಕೆಯಲ್ಲಿ ನನ್ನ ಮೃತ ಗಂಡನ ಹೆಸರಿನಲ್ಲಿರುವ ಆಸ್ತಿಯನ್ನು ಖರೀದಿ ಮಾಡುವುದಾದರೆ ನನ್ನ ತಕರಾರಿದೆ ಎಂಬುದಾಗಿ ನನ್ನ ಪ್ರಕಟಣೆಯನ್ನು ನೀಡಿದ್ದೇನೆ. ಅದರಂತೆ 1 ರಿಂದ 5 ನೇ ಪ್ರತಿವಾದಿಯರು ನನ್ನ ಗಂಡನ ಹೆಸರಿನಲ್ಲಿರುವ ಯಾವುದೇ ಸ್ವತ್ತನ್ನು ಮಾರಾಟ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ವಿಚ್ಛೇದನ ಅರ್ಜಿಯಲ್ಲಿ ಯಾವುದೇ ಪಾಲನ್ನು ಕೇಳದೇ ಇರುವುದರಿಂದ ಈಗ ನನಗೆ ಪಾಲನ್ನು ಕೇಳಲು ಹಕ್ಕಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

(ಈ ಹಂತದಲ್ಲಿ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ಪ್ರ ದ ನ್ಯಾದಂ ಹೊನ್ನಾವರ.